ಈ ಲೇಖನದ ವಿಷಯಾನುಕ್ರಮಣಿಕೆ


**ಹನುಮಾನ್ ಚಾಳೀಸಾ ಏಕೆ ಪಠಿಸಬಾರದು** **3**

**ಸಿದ್ಧಿಪ್ರದ ವಾಯುಸ್ತೋತ್ರಗಳು** **5**

**ಯಂತ್ರೋದ್ಧಾರಕ ಸ್ತೋತ್ರ** **6**

**ಮಧ್ವನಾಮ** **6**

# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 75

## ಹನುಮಾನ್ ಚಾಲೀಸಾ ಪಠಿಸಬಾರದೇಕೆ ಮತ್ತು ಸಿದ್ಧಿಪ್ರದ ಹನುಮತ್ ಸ್ತೋತ್ರಗಳನ್ನು ತಿಳಿಸಿ.

ಗುರುಗಳಿಗೆ ನಮಸ್ಕಾರಗಳು. ಹನುಮಾನ್ ಚಾಳೀಸಾ ನಾವು ಏಕೆ ಪಠಿಸಬಾರದು ಎನ್ನುತ್ತಾರೆ. ದಯವಿಟ್ಟು ಕಾರಣ ತಿಳಿಸಿ.

— ವೀಣಾ ಶ್ರೀಕಾಂತ್

ಆಚಾರ್ಯರೇ ನಮಸ್ಕಾರಗಳು, ಶ್ರೀ ಹನುಮಾನ್ ಚಾಳೀಸಾ ಓದುವವರಿಗೆ ನಮ್ಮ ಮಾಧ್ವ ಸಂಪ್ರದಾಯದಂತೆ ಶ್ರೇಷ್ಠವಾದ ಆದರೂ ಸರಳವಾದ ಶ್ರೀಮುಖ್ಯಪ್ರಾಣ ದೇವರ ಸ್ತೋತ್ರವನ್ನು ತಿಳಿಸಿರಿ.

— ಗಣೇಶ್ ಕಾಮತ್

## ಹನುಮಾನ್ ಚಾಳೀಸಾ ಏಕೆ ಪಠಿಸಬಾರದು

ಹನುಮಾನ್ ಚಾಲೀಸಾದಲ್ಲಿ ಹನುಮಂತದೇವರು ಶಿವನ ಅವತಾರವೆಂದೂ, ಸೂರ್ಯನನ್ನು ಹಣ್ಣೆಂದು ತಿಳಿದು ತಿನ್ನಲು ಹಾರಿದರೆಂದೂ ವಚನಗಳಿವೆ.
ಶಂಕರ ಸುವನ ಕೇಸರಿ ನಂದನ ' ತೇಜ ಪ್ರತಾಪ ಮಹಾ ಜಗ ವಂದನ'
ಸಹಸ ಜೋಜನ ಪರ ಭಾನೂ ' ಲೀಲ್ಯೋತಾಹಿ ಮಧುರ ಫಲ ಜಾನೂ '

ಇವು ಶಾಸ್ತ್ರದ ತತ್ವಕ್ಕೆ ವಿರುದ್ಧವಾದವು.

ಕಾರಣ ಹನುಮಂತದೇವರು ವಾಯುದೇವರ ಅವತಾರ ಎನ್ನುವದು ವೇದಗಳಿಂದ, ಮಹಾಭಾರತದಿಂದ ಸಿದ್ಧವಾದ ವಿಷಯ. ಶ್ರೀಮದಾಚಾರ್ಯರೂ ನಿಸ್ಸಂದಿಗ್ಧವಾಗಿ ನಿರ್ಣಯಿಸಿದ್ದಾರೆ.

ಹಾಗೆಯೇ, ಸೂರ್ಯನನ್ನು ಹಣ್ಣೆಂದು ಭ್ರಮಿಸಿ ಹಾರಿದ್ದಲ್ಲ, ರಾಹುಗ್ರಸ್ತನಾಗುತ್ತಿದ್ದ ಸೂರ್ಯನನ್ನು ಕಾಪಾಡಲು ಹಾರಿದ್ದು ಎಂದು ಶ್ರೀ

ನಾರಾಯಣಪಂಡಿತಾಚಾರ್ಯರು ಸಂಗ್ರಹರಾಮಾಯಣದಲ್ಲಿ ನಿರ್ಣಯಿಸಿದ್ದಾರೆ[1].

ಶಾಸ್ತ್ರಕ್ಕೆ ವಿರುದ್ಧವಾದುದನ್ನು ಸ್ತೋತ್ರ ಮಾಡುವದಾಗಲೀ, ಉಪಾಸನೆ ಮಾಡುವದಾಗಲೀ ಸರ್ವಥಾ ಮಾಡಬಾರದು.

ಇರುವದನ್ನು ಇರುವಂತೆ ತಿಳಿಯಬೇಕೇ ಹೊರತು, ಮತ್ತೇನನ್ನೋ ತಿಳಿಯಬಾರದು, ಆ ರೀತಿ ತಿಳಿಯುವದರಿಂದ ಅನರ್ಥವುಂಟಾಗುತ್ತದೆ ಎಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸುತ್ತಾರೆ.

---

[1] ಹನುಮದವತಾರದ ಉಪನ್ಯಾಸದಲ್ಲಿ [VNU028] ಮತ್ತು ಮಧ್ವವಿಜಯದ ಮೊದಲನೆಯ ಸರ್ಗದ ಅನುವಾದದಲ್ಲಿ ಬರುವ ಹನುಮಂತದೇವರ ಕಥೆಯಲ್ಲಿ [VNU204] ವಿವರಿಸಿದ್ದೇನೆ. ಕೇಳಿ.

## ಸಿದ್ಧಿಪ್ರದ ವಾಯುಸ್ತೋತ್ರಗಳು

ಮಾಧ್ವಸಾಹಿತ್ಯದಲ್ಲಿ ನೂರಾರು ಶ್ರೇಷ್ಠ ವಾಯುಸ್ತೋತ್ರಗಳಿವೆ. ಮಾಧ್ವರ ಮಾಂಗಲ್ಯದಂತಿರುವ ವಾಯುಸ್ತುತಿ ಸ್ವಯಂ ಶ್ರೀಮದಾಚಾರ್ಯರ ಅನುಗ್ರಹದಿಂದ ಮಂತ್ರತುಲ್ಯವಾದ ಸ್ತೋತ್ರ. ತಲೆನೋವಿನಂತಹ ಪುಟ್ಟ ಉಪದ್ರವದ ಪರಿಹಾರದಿಂದ ಹಿಡಿದು ಪರಿಹರಿಸಲಾಗದ ಖಾಯಿಲೆಯ ಪರಿಹಾರದ ವರೆಗೆ, ಕಡೆಗೆ ಭವರೋಗವನ್ನು ಕಳೆಯುವ ಮುಕ್ತಿಯನ್ನೂ ನೀಡುವ ಸ್ತೋತ್ರ — ವಾಯುಸ್ತುತಿ. "ಮುಕ್ತಿಮೇತೇ ವ್ರಜಂತಿ" ಎಂದು ಸ್ವಯಂ ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಇದರ ಫಲವನ್ನು ತಿಳಿಸಿದ್ದಾರೆ.

ಪಂಡಿತಾಚಾರ್ಯರೇ ರಚಿಸಿರುವ ಅನೇಕ ವಾಯುಸ್ತೋತ್ರಗಳು, ಜ್ಞಾನಿವರ್ಯರು ರಚಿಸಿರುವ ಸ್ತೋತ್ರಗಳು ವಿಪುಲವಾಗಿ ಮಾಧ್ವಸಾಹಿತ್ಯದಲ್ಲಿ ಉಪಲಬ್ಧವಾಗಿವೆ.

## ಯಂತ್ರೋದ್ಧಾರಕ ಸ್ತೋತ್ರ

ಸರ್ವಸಿದ್ಧಿಪ್ರದವಾದ ಹನೂಮತ್ ಸ್ತೋತ್ರ ಎಂದರೆ — ಯಂತ್ರೋದ್ಧಾರಕ ಹನೂಮತ್ ಸ್ತೋತ್ರ.

ಶ್ರೀಮದ್ ವ್ಯಾಸರಾಜಗುರುಸಾರ್ವಭೌಮರು ರಚಿಸಿರುವ ಈ ಸ್ತೋತ್ರದ ಪಠಣದಿಂದ ಎಂತಹ ಅಸಾಧ್ಯವಾದ ಕಾರ್ಯವೂ ಸಹ ಸುಲಭವಾಗಿ ಕೈಗೂಡುತ್ತದೆ. ವಿಘ್ನಗಳ ಪರಿಹಾರ, ರೋಗಗಳ ವಿನಾಶ, ಸಂಪತ್ತಿನ ಪ್ರಾಪ್ತಿ ಮುಂತಾದ ಸಕಲ ಅಭೀಷ್ಟಗಳೂ ಅದರಿಂದ ಸಾಧ್ಯ. ಮೂರೂ ಹೊತ್ತು ಪಠಣ ಮಾಡಲು ಸುಲಭವಾದ ಪುಟ್ಟದಾದ ಸ್ತೋತ್ರ.

## ಮಧ್ವನಾಮ

ಇನ್ನು ಶ್ರೀಪಾದರಾಜಗುರುಸಾರ್ವಭೌಮರು ರಚಿಸಿರುವ ಶ್ರೀ ಮಧ್ವನಾಮ ಸರ್ವಾಭೀಷ್ಟಪ್ರದವಾದ ಸಿದ್ಧಸ್ತೋತ್ರ. ಶ್ರೀ ಜಗನ್ನಾಥದಾಸಾರ್ಯರು ಇದರ ಪಠಣದಿಂದ ಸಿದ್ಧಿಯನ್ನು ಪಡೆದು

ಸೋಮ ಸೂರ್ಯೋಪರಾಗದಿ ಗೋಸಹಸ್ರಗಳ
ಭೂಮಿದೇವರಿಗೆ ಸುರನದಿಯ ತಟದಿ
ಶ್ರೀಮುಕುಂದಾರ್ಪಣವೆನುತ ಕೊಟ್ಟ ಫಲಮಕ್ಕು
ಈ ಮಧ್ವನಾಮ ಬರೆದೋದಿದರ್ಗೆ ||

ಪುತ್ರರಿಲ್ಲದವರು ಸತ್ಪುತ್ರರೈದುವರು
ಸರ್ವತ್ರದಲಿ ದಿಗ್ವಿಜಯವಹುದು ಸಕಲ
ಶತ್ರುಗಳು ಕೆಡುವರಪಮೃತ್ಯು ಬರಲಂಜುವುದು
ಸೂತ್ರನಾಮಕನ ಸಂಸ್ತುತಿ ಮಾತ್ರದಿ ||

ಶ್ರೀಪಾದರಾಯ ಪೇಳಿದ ಮಧ್ವನಾಮ ಸಂ-
ತಾಪಕಳೆದಖಿಲ ಸೌಖ್ಯವನೀವುದು
ಶ್ರೀಪತಿ ಜಗನ್ನಾಥವಿಠಲನ ತೋರಿ ಭವ
ಕೂಪಾರದಿಂದ ಕಡೆ ಹಾಯಿಸುವುದು ||

ಎಂಬ ಅದ್ಭುತ ಫಲಶ್ರುತಿಯನ್ನು ತಮ್ಮ ಕೃತಿಯ ಮೂಲಕ ದಾಖಲಿಸಿದ್ದಾರೆ.

ಅವತಾರತ್ರಯಗಳ ಕಾರ್ಯವನ್ನೂ ಅದ್ಭುತವಾಗಿ ನಿರೂಪಿಸುವ, ಸರ್ವಮೂಲೋಕ್ತ ಪ್ರಮೇಯಗಳನ್ನು ಸರಳವಾಗಿ ಹೃದಯಂಗಮವಾಗಿ ಚಿತ್ರಿಸುವ ಈ ಮಧ್ವನಾಮದ ಪಠಣ ಜೀವನದ ಸೌಭಾಗ್ಯ.

ಹಾಗೆಯೇ ದಾಸಸಾಹಿತ್ಯದಲ್ಲಿನ ಹಾಡುಗಳೂ ಶ್ರೇಷ್ಠ ಫಲಗಳನ್ನು ಕರುಣಿಸುವಂತಹ ಸ್ತೋತ್ರಗಳೇ.

ಯಾವ ಸ್ತೋತ್ರಗಳಲ್ಲಿ ವೇದ-ಶಾಸ್ತ್ರಗಳಿಗೆ ವಿರುದ್ಧವಾದ ತತ್ವವಿಲ್ಲವೋ, ಯಾವುದರಲ್ಲಿ ಶಾಸ್ತ್ರತತ್ವಗಳ ಪರಿಶುದ್ಧ ನಿರೂಪಣೆಯಿದೆಯೋ ಅಂತಹ ಸ್ತೋತ್ರಗಳ ಪಠಣದಿಂದ ಮಾತ್ರ ನಾವು ಪರಿಶುದ್ಧಫಲವನ್ನು ಪಡೆಯಲು ಸಾಧ್ಯ. ಜ್ಞಾನವನ್ನು ಪಡೆಯಲು ಸಾಧ್ಯ.

— ವಿಷ್ಣುದಾಸ ನಾಗೇಂದ್ರಾಚಾರ್ಯ